ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ
ಶ್ರೀರಂಗಪಟ್ಟಣ
ಸಿಸಿ 23/2019 ಸಿಡಬ್ಲೂ ಃ 2 ಪಿ ಡಬ್ಲೂ ಃ 2

| | |
|---|---|
| ಹೆಸರು | ಮಹದೇವಮ್ಮ |
| ಗಂಡನ ಹೆಸರು | ಮೃತ ಜಯರಾಮು |
| ವಯಸ್ಸು | 60 ವರ್ಷ |
| ವೃತ್ತಿ | ಕೂಲಿ ಕೆಲಸ |
| ವಾಸ | ಕೂಡಲಕುಪ್ಪೆ |

ದಿನಾಂಕಃ 29.01.2024 ರಂದು ಸಾಕ್ಷಿಗೆ ಪ್ರಮಾಣ ವಚನ ನೀಡಲಾಯಿತು.

ಮುಖ್ಯ ವಿಚಾರಣೆ ಎ ಪಿ ಪಿ ರವರಿಂದಃ

1. ಚಾಸಾ 1 ನನ್ನ ಮಗ. ಚಾಸಾ 3 ನನ್ನ ಸಂಬಂಧಿ. ಚಾಸಾ 4, 10, 11, 19 ರವರ ಪರಿಚಯವಿದೆ. ಚಾಸಾ 5 ರಿಂದ 9, 12 ರಿಂದ 14 ಮತ್ತು 17 ರಿಂದ 19, 21 ರಿಂದ 23 ರವರ ಪರಿಚಯವಿಲ್ಲ. ಚಾಸಾ 15 ನನ್ನ ಮತ್ತೊಬ್ಬ ಮಗ, ಚಾಸಾ 16 ನನ್ನ ಸಂಬಂಧಿಕರು. ಚಾಸಾ 20 ಮೃತ ರಾಜು ಅವರ ಪತ್ನಿಯಾಗಿದ್ದು, ಆಕೆ ಈಗ ಮರಣ ಹೊಂದಿರುತ್ತಾಳೆ. ಜಯರಾಮು ನನ್ನ ಪತಿ ಮತ್ತು ರಾಜು ನನ್ನ ತಮ್ಮ. ಅವರಿಬ್ಬರು ಅಪಘಾತದಲ್ಲಿ ಮರಣ ಹೊಂದಿರುತ್ತಾರೆ. ಸುಮಾರು 4 ವರ್ಷದ ಹಿಂದೆ ನನ್ನ ಪತಿ ಜಯರಾಮು ಮತ್ತು ನನ್ನ ತಮ್ಮ ರಾಜುವಿಗೆ ಶ್ರೀರಂಗಪಟ್ಟಣ ಬನ್ನೂರು ಮುಖ್ಯ ರಸ್ತೆಯ ಚಿನ್ನಾಯಕನಹಳ್ಳಿ ಭೀಮ್ ರಾವ್ ಅವರ ಮನೆಯ ಹತ್ತಿರ ಅಪಘಾತವಾಗಿರುತ್ತದೆ. ಸದರಿ ಅಪಘಾತ ಯಾವ ರೀತಿ ಆಗಿದೆ ಗೊತ್ತಿಲ್ಲ. ನಾನು ಅಪಘಾತವನ್ನು ನೋಡಿಲ್ಲ. ನನ್ನ ಪತಿ ಮತ್ತು ರಾಜು ಅಪಘಾತದಲ್ಲಿ ಸ್ಥಳದಲ್ಲೇ ಮೃತ ಪಟ್ಟಿರುತ್ತಾರೆ. ನನ್ನ ಪತಿಗೆ ಯಾವುದೇ

ಗಾಯವಾಗಿರುವುದಿಲ್ಲ, ಆದರೆ ಸ್ಥಳದಲ್ಲೇ ಮೃತ ಪಟ್ಟಿರುತ್ತಾರೆ. ನನ್ನ ಪತಿಗೆ ಅಪಘಾತವಾಗಿದೆ ಎಂದು ನಮ್ಮ ಅಕ್ಕಪಕ್ಕದವರು ತಿಳಿಸಿರುತ್ತಾರೆ. ನಾನು ಪೋಲೀಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ.

ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಎ ಪಿ ಪಿರವರು ಅನುಮತಿ ಕೋರುತ್ತಿದ್ದು , ಸಾಕ್ಷಿಯ ಸಾಕ್ಷ್ಯವನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.

ಪಾಟೀ ಸವಾಲು : ಎ ಪಿ ಪಿ ರವರಿಂದಃ

2. ಅಪಘಾತವು ದಿಃ 19.10.2018 ರಂದು ಮಧ್ಯಾಹ್ನ 3.30 ಕ್ಕೆ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಆ ದಿನ ದ್ವಿ ಚಕ್ರ ವಾಹವನ್ನು ರಾಜು ಅವರು ಚಲಾಯಿಸುತ್ತಿದ್ದು, ನನ ಪತಿ ಹಿಬಂದಿಯಲ್ಲಿ ಕುಳಿತುಕೊಂಡಿದ್ದರು ಎಂದರೆ ಸರಿ. ಸದರಿ ದ್ವಿ ಚಕ್ರ ವಾಹನದ ಸಂಖ್ಯೆಃ ಕೆಎ-55-ಇ-8674 ಎಂದರೆ ನನಗೆ ಗೊತ್ತಿಲ್ಲ. ಆ ದಿನ ಕಾರ್ ಚಾಲಕ ಎದುರುನಿಂದ ಅತಿವೇಗ ಹಾಗೂ ಅಜಾಗರೂಕತೆಯಿಂದ ಅಡ್ಡಾದಿಡ್ಡಿಯಾಗಿ ಬಂದು ರಾಜು ಅವರು ಓಡಿಸುತ್ತಿದ್ದ ದ್ವಿ ಚಕ್ರ ವಾಹನಕ್ಕೆ ಡಿಕ್ಕಿ ಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಅಪಘಾತವಾದ ತಕ್ಷಣ ನಾನು, ಚಾಸಾ1, 3 ಮತ್ತು 4 ರವರು ಬಂದು ನನ್ನ ಪತಿ ಹಾಗೂ ರಾಜು ಅವರನ್ನು ಉಪಚರಿಸಿರುತ್ತೇವೆ ಎಂದರೆ ಸರಿಯಲ್ಲ. ಅಪಘಾತಪಡಿಸಿದ ಕಾರ್ ನ ನೋಂದಣಿ ಸಂಖ್ಯೆಃ ಕೆಎ-05-ಎಂಎನ್-5574 ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಾನು, ನನ್ನ ಮಗ ಮತ್ತು ಚಾಸಾ 3 ಮತ್ತು 4 ರವರು ಹೋಗಿ ನೋಡಲಾಗಿ ನನ್ನ ಪತಿಯ ತಲೆಗೆ, ಕೈ ಕಾಲಿಗೆ ಏಟಾಗಿದ್ದು, ನನ್ನ ಅಣ್ಣನಿಗೆ ತಲೆ ಮುತ್ತ ಮೈಕೈಗೆ ಏಟಾಗಿ ರಕ್ತ ಸುರಿಯುತ್ತಿತ್ತು ಎಂದರೆ ಸರಿಯಲ್ಲ. ನಾವುಗಳು ಅವರನ್ನು ಯಾವುದೋ ಆಂಬುಲೆನ್ಸ್ ಶ್ರೀರಂಗಪಟ್ಟಣ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದೆವು ಎಂದರೆ ಸರಿಯಲ್ಲ. ನನ್ನ ಅಣ್ಣನನ್ನು

ಹೆಚ್ಚಿನ ಚಿಕಿತ್ಸೆಗೆ ಕೆ ಆರ್ ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಿದ್ದಾಗ ಆತ ಮಾರ್ಗ ಮಧ್ಯದಲ್ಲಿ ಮರಣ ಹೊಂದಿರುತ್ತಾನೆ ಎಂದರೆ ಸಾಕ್ಷಿ ಆತ ಸ್ಥಳದಲ್ಲೇ ಮರಣ ಹೊಂದಿದ್ದ ಎಂದು ನುಡಿಯುತ್ತಾರೆ. ದಿಃ 18.12.2018 ರಂದು ಪೊಲೀಸರು ನನ್ನನ್ನು ಠಾಣೆಗೆ ಕರೆದಿದ್ದು, ನನ್ನ ಸಮಕ್ಷಮ ಆರೋಪಿಯನ್ನು ವಿಚಾರಿಸಲಾಗಿ ಆತನ ಹೆಸರು ರಾಘವೇಂದ್ರ ಬಿನ್ ಶಿವರಾಮು, ವಾಸಃ ಹೊನ್ನೇನಹಳ್ಳಿ ಗ್ರಾಮ, ಮುರುಕನಹಳ್ಳಿ ಪೋಸ್ಟ್, ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಆ ದಿನ ದ್ವಿ ಚಕ್ರ ವಾಹನವನ್ನು ಠಾಣಾ ಆವರಣದಲ್ಲಿ ನಿಲ್ಲಿಸಿದ್ದು, ಅದರ ನೋಂದಣಿ ಸಂಖ್ಯೆಃ ಕೆಎ-05-ಎಂಎನ್-5574 ಆಗಿರುತ್ತದೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿಯು ಆ ದಿನ ಅಪಘಾತಪಡಿಸಿರುತ್ತಾನೆ ಎಂದರೆ ಸಾಕ್ಷಿ ನಾನು ಆತನನ್ನು ನೋಡಿಲ್ಲ ಎಂದು ನುಡಿಯುತ್ತಾರೆ. ಆರೋಪಿಯ ತಪ್ಪಿನಿಂದ ಅಪಘಾತವಾಗಿದ್ದು, ನಾನು ಆತನನ್ನು ನೋಡಿದ್ದರೂ ಸಹ ಆತನಿಗೆ ಅನುಕೂಲವಾಗಲೀ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ನಾನು ಮೇಲ್ಕಂಡ ............ ಮತ್ತೆ ನೋಡಿದರೆ ಗುರುತಿಸುತ್ತೇನೆ. ಈಗ ಓದಿ ಹೇಳಿದ ರೀತಿ ಪೊಲೀಸರಿಗೆ ಹೇಳಿಕೆಯನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಪಿ 7 ಎಂದು ಗುರುತಿಸಲಾಗಿದೆ.

4. ಈ ದಿನ ಶ್ರೀರಂಗಪಟ್ಟಣ ............ ಹೇಳಿಕೆಯನ್ನು ನೀಡಿರುತ್ತೇನೆ. ಈಗ ಓದಿ ಹೇಳಿದ ರೀತಿ ಪೊಲೀಸರಿಗೆ ಮುಂದುವರೆದ ಹೇಳಿಕೆಯನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಪಿ 8 ಎಂದು ಗುರುತಿಸಲಾಗಿದೆ.

<u>ಪಾಟೀ ಸವಾಲು ಃ ಆರೋಪಿ ಪರ ವಕೀಲರಿಂದಃ</u>

ವಕೀಲರು ಹಾಜರಿದ್ದು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

ಮರು ವಿಚಾರಣೆ ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.

ಓ ಹೇ ಕೆ ಸ ಇ ಒ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು

ಶ್ರೀರಂಗಪಟ್ಟಣ.

-